MIS.No. 6/2024 PW-1

**<u>ದಿನಾಂಕ 09.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆಎಸ್ ವಕೀಲರಿಂದಃ</u>**

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದನ್ನು ನನ್ನ ಸಾಕ್ಷ್ಯಾವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ಅರ್ಜಿಗೆ ಸಂಬಂದಪಟ್ಟಂತೆ ಅಧಿಕಾರ ಪತ್ರವನ್ನು ನಿಪಿ-1 ಎಂದು, ಎಂ ವಿ ಸಿ ಸಂಖ್ಯೆ 469/2018 ರ ತೀರ್ಪು ಮತ್ತು ಅವಾರ್ಡ್ ನ ದೃಡೀಕೃತ ನಕಲನ್ನು ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಎದುರುದಾರರಾದ ಆರ್ 1 ಪರ ಶ್ರೀ ಎಂಕೆಎನ್ ವಕೀಲರಿಂದಃ</u>**

ಎಂ ವಿ ಸಿ ಸಂಖ್ಯೆ 469/2018 ರಲ್ಲಿ ನಮಗೆ ನೋಟೀಸ್ ಜಾರಿಯಾಗಿದೆ ಎಂದರೆ ಸುಳ್ಳು. ರಾಮನಗರದಲ್ಲಿದ್ದ ನಮ್ಮ ಕಛೇರಿ ಯಾವ ವರ್ಷದಿಂದ ಯಾವ ವರ್ಷಕ್ಕೆ ಕೊನೆಗೊಂಡಿತು ಎಂದು ಹೇಳಲು ದಾಖಲೆ ನೋಡಬೇಕಾಗುತ್ತದೆ. ರಾಮನಗರದಲ್ಲಿದ್ದ ನಮ್ಮ ಕಛೇರಿ ಯಾವ ವರ್ಷಕ್ಕೆ ಕೊನೆಗೊಂಡಿತು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಿನಾಂಕ ತಿಳಿಸಿಲ್ಲ. ಯಾವ ವರ್ಷಕ್ಕೆ ಕೊನೆಗೊಂಡಿತು ಎಂದು ತಿಳಿಸಲು ತೊಂದರೆ ಇಲ್ಲ. ಎಂ ವಿ ಸಿ ಸಂಖ್ಯೆ 469/2018 ರಲ್ಲಿ ಯಾವ ವರ್ಷದಲ್ಲಿ ನೋಟೀಸ್ ಜಾರಿಯಾಯಿತು ಎಂದು ಮಾಹಿತಿ ಇಲ್ಲ. ಎಂ ವಿ ಸಿ ಸಂಖ್ಯೆ 469/2018 ರಲ್ಲಿ ನೋಟಿಸ್ ಯಾವಾಗ ಮತ್ತು ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂದು ತಿಳಿದುಕೊಂಡಿಲ್ಲ. ನನಗೆ ಅಪೂರ್ಣ ಮಾಹಿತಿಯಿಂದ ನಾನು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆಂದರೆ ಸುಳ್ಳು. ರಾಮನಗರದಲ್ಲಿದ್ದ ನಮ್ಮ ಕಛೇರಿ ಯಾವ ವರ್ಷದಿಂದ ಯಾವ ವರ್ಷಕ್ಕೆ ಕೊನೆಗೊಂಡಿತು ಎಂದು ಮಾಹಿತಿ ನೀಡಲು ತೊಂದರೆ ಇಲ್ಲ. 2018 ರಲ್ಲಿ ರಾಮನಗರದಲ್ಲಿದ್ದ ನಮ್ಮ ಕಛೇರಿ ಕಾರ್ಯನಿರ್ವಹಿಸುತ್ತಿತ್ತು ಎಂದರೆ ಸಾಕ್ಷಿಯು ದಾಖಲೆ ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಕಛೇರಿಯ ದಾಖಲೆಗಳನ್ನು ನೋಡಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ರಾಮನಗರದಲ್ಲಿದ್ದ ನಮ್ಮ ಕಛೇರಿ ಯಾವಾಗ ಮುಚ್ಚಿದೆ ಎಂದು ನಾನು ನೋಡಿರುವ ದಾಖಲೆಯನ್ನುನೋಡಿ ಹೇಳಬೇಕಾಗುತ್ತದೆ. ಈ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 2018 ರಿಂದ 2024 ರವರೆಗೆ ರಾಮನಗರದಲ್ಲಿದ್ದ ನಮ್ಮ ಕಛೇರಿ ಕಾರ್ಯನಿರ್ವಹಿಸುತ್ತಿತ್ತು ಎಂದರೆ ಸುಳ್ಳು. 2018 ಮತ್ತು 2019 ರಲ್ಲಿ ರಾಮನಗರದಲ್ಲಿದ್ದ ನಮ್ಮ ಕಛೇರಿ ಕಾರ್ಯನಿರ್ವಹಿಸುತ್ತಿತ್ತು ಎಂದರೆ ಸುಳ್ಳು.ನೋಟೀಸ್ ಅನ್ನು ನಮ್ಮ ಕಛೇರಿಯ ಸಿಬ್ಬಂದಿ ಸ್ವೀಕರಿಸಿದ್ದಾರೆಂದರೆ ಸುಳ್ಳು. ಎಂ ವಿ ಸಿ ಸಂಖ್ಯೆ 469/2018 ರ ತೀರ್ಪು ಮತ್ತು ಅವಾರ್ಡ್ ಅನ್ನುಪ್ರಶ್ನೆ ಮಾಡಿಲ್ಲ. ನೋಟೀಸ್

ಜಾರಿಯಾಗಿದ್ದರಿಂದ ಪ್ರಸ್ತುತ ಅರ್ಜಿ ಕಾನೂನು ಮಾನ್ಯತೆ ಪಡೆಯುವುದಿಲ್ಲ ಎಂದರೆ ಸುಳ್ಳು .ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**